# ಕನ್ನಡ ವಿಶ್ವವಿದ್ಯಾಲಯ ಹಂಪಿ

ವಿಸ್ತರಣಾ ಕೇಂದ್ರ ದೇವದುರ್ಗ ಜಿಲ್ಲಾ ರಾಯಚೂರು

ಮೊ.ನಂ. ೯೬೧೧೨೨೦೪೨೫ Email – devadurga2017@gmail.com

---

ಹೈದ್ರಾಬಾದ್ ಕರ್ನಾಟಕದ ಹಿಂದುಳಿದ ಪ್ರದೇಶವಾದ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿಸ್ತರಣಾ ಕೇಂದ್ರವನ್ನು 2017–18ರ ಶೈಕ್ಷಣಿಕ ವರ್ಷದಲ್ಲಿ ಸ್ಥಾಪಿತವಾಗಿದೆ. ಈ ಭಾಗದ ಹಿಂದುಳಿದ ಮತ್ತು ಬಡ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಒದಗಿಸುವ ಮತ್ತು ಸಂಶೋಧನೆಗೆ ಅನುಕೂಲ ಮಾಡಿಕೊಡುವ ಉದ್ದೇಶವನ್ನು ಈ ವಿಸ್ತರಣಾ ಕೇಂದ್ರವು ಹೊಂದಿದೆ. ಇಲ್ಲಿ ಎಂ.ಎ.ಪಿಎಚ್.ಡಿ. ಕನ್ನಡ ಸಾಹಿತ್ಯ ಸಂಯೋಜಿತ ಪದವಿ ಮತ್ತು ಎಂ.ಎ.ಪಿಎಚ್.ಡಿ. ಗ್ರಾಮೀಣ ಅಭಿವೃದ್ಧಿ ಸಂಯೋಜಿತ ಪದವಿ ಹಾಗೂ ಬಿ.ಮ್ಯೂಜಿಕ್ ಸ್ನಾತಕ ಪದವಿಗಳು ಪ್ರಾರಂಭಗೊಂಡಿವೆ. ಈ ಮೂರು ವಿಭಾಗಗಳು ಕಾರ್ಯ ನಿರ್ವಹಿಸುತ್ತಿವೆ. ಹೈದ್ರಾಬಾದ್ ಕರ್ನಾಟಕವು ಹಿಂದುಳಿದ ಪ್ರದೇಶವೆಂಬ ಹಣೆಪಟ್ಟಿಯನ್ನು ಹೋಗಲಾಡಿಸಿ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ಸಾಹಿತ್ಯಿಕ ಪ್ರಗತಿಯನ್ನು ಸಾಧಿಸುವುದೇ ಈ ವಿಸ್ತರಣಾ ಕೇಂದ್ರದ ಪ್ರಮುಖ ಗುರಿಯಾಗಿದೆ. ಈ ಭಾಗದ ಅಭಿವೃದ್ಧಿ ಹಾಗೂ ಜನರ ಜೀವನಮಟ್ಟ ಮತ್ತು ಸಾಂಸ್ಕೃತಿಕ ಸುಧಾರಣೆಗಳನ್ನು ಪರಿಚಯಿಸುವುದು ಈ ಕೇಂದ್ರ ಸ್ಥಾಪನೆಯ ಪ್ರಮುಖ ಉದ್ದೇಶವಾಗಿದೆ. ದೇವದುರ್ಗ ತಾಲ್ಲೂಕು ವ್ಯಾಪ್ತಿಯಲ್ಲಿ ಪ್ರಸ್ತುತ ಕೇಂದ್ರದ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಸಕ್ರೀಯವಾಗಿ, ಅಧ್ಯಯನ ಹಾಗೂ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುವ ಬಹು ಮಹತ್ವದ ಆಶಯ ಹೊಂದಿದೆ. ಇದು ಈ ಕೇಂದ್ರ ಸ್ಥಾಪನೆಯ ಪ್ರಮುಖ ಕಾರ್ಯಸೂಚಿಗಳಲ್ಲಿ ಒಂದಾಗಿದೆ.

ಕನ್ನಡ ವಿಶ್ವವಿದ್ಯಾಲಯ ಹಂಪಿ, ದೇವದುರ್ಗ ವಿಸ್ತರಣಾ ಕೇಂದ್ರವು ವಿಶ್ವವಿದ್ಯಾಲಯದ ನಿಗದಿತ ಪಠ್ಯಬೋಧನೆಯನ್ನು ವ್ಯವಸ್ಥಿತವಾಗಿ ಮಾಡುವುದಲ್ಲದೇ ಈ ಭಾಗದ ಕನ್ನಡಿಗರ ಬದುಕು, ಹೋರಾಟದ ಹಾದಿ ಹಾಗೂ ಸಮಾಜಿಕ, ಸಾಂಸ್ಕೃತಿಕ ಅಧ್ಯಯನಗಳ ಸ್ವರೂಪ ಹಾಗೂ ನೆಲೆ–ಬೆಲೆಗಳನ್ನು ಹುಡುಕುವುದು ಪ್ರಮುಖ ಧ್ಯೇಯವಾಗಿದೆ.

ಈ ನಿಟ್ಟಿನಲ್ಲಿ ಈ ಮೂರು ವಿಭಾಗಗಳು ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರದಲ್ಲಿ ಒಟ್ಟು 55 ವಿದ್ಯಾರ್ಥಿಗಳು ಅಧ್ಯಯನದಲ್ಲಿ ತೊಡಗಿರುವರು. ಇನ್ನು ಮುಂದೆ ಹೆಚ್ಚು ಹೆಚ್ಚು ವಿದ್ಯಾರ್ಥಿಗಳನ್ನು ಅಧ್ಯಯನಕ್ಕೆ ತೊಡಗಲು ಅನುಕೂಲ ಮಾಡಿಕೊಡಲಾಗುವುದು.

**ಎಂ.ಎ.ಪಿಹೆಚ್.ಡಿ ಕನ್ನಡ ಸಾಹಿತ್ಯ ವಿಭಾಗದ ಪ್ರಾಧ್ಯಾಪಕರ ವಿವರ:**

| ಕ್ರ.ಸಂ. | ಪ್ರಾಧ್ಯಾಪಕರ ಹೆಸರು | ಅರ್ಹತೆ | ಸೇವಾ ಅವಧಿ |
|---|---|---|---|
| 1 | ಡಾ. ಶಾಂತಪ್ಪ<br>ಸಹಾಯಕ ಪ್ರಾಧ್ಯಾಪಕರು | ಎಂ.ಎ., ಕನ್ನಡ ಮತ್ತು ಜಾನಪದ<br>ಎಂ.ಫಿಲ್ ಕನ್ನಡ<br>ಪಿಎಚ್.ಡಿ ಕನ್ನಡ | 27–03–2018<br>ರಿಂದ |
| 2 | ಡಾ. ಗಂಗಮ್ಮ<br>ತಾತ್ಕಾಲಿಕ ಅಧ್ಯಾಪಕರು | ಎಂ.ಎ., ಕನ್ನಡ ಮತ್ತು ಜಾನಪದ<br>ಪಿಎಚ್.ಡಿ ಜಾನಪದ | 03–09–2018<br>ರಿಂದ |
| 3 | ಶ್ರೀ.ಸಾಬಣ್ಣ<br>ತಾತ್ಕಾಲಿಕ ಅಧ್ಯಾಪಕರು | ಎಂ.ಎ ಕನ್ನಡ | 03–09–2018<br>ರಿಂದ |

**ಎಂ.ಎ.ಪಿಹೆಚ್.ಡಿ ಕನ್ನಡ ಸಾಹಿತ್ಯ ವಿಭಾಗದ ವಿದ್ಯಾರ್ಥಿಗಳ ವಿವರ:**

| **2017-18** | | | | |
|---|---|---|---|---|
| **M.A.Ph.D. Kannada Sahitya** | | | | |
| **Sl No** | | **Male** | **Female** | **Total** |
| **1** | **(GM)** | - | 01 | **01** |
| **2** | **(SC)** | - | 03 | **03** |
| **3** | **(ST)** | - | - | **-** |
| **4** | **(OBC)** | 01 | - | **01** |
| **Total** | | **01** | **04** | **05** |

| **2018-19** | | | | |
|---|---|---|---|---|
| **M.A.Ph.D. Kannada Sahitya** | | | | |
| **Sl No** | | **Male** | **Female** | **Total** |
| **1** | **(GM)** | - | - | **-** |
| **2** | **(SC)** | 01 | 02 | **03** |
| **3** | **(ST)** | 01 | 02 | **03** |
| **4** | **(OBC)** | 05 | 09 | **14** |
| **Total** | | **07** | **13** | **20** |

**ಎಂ.ಎ.ಪಿಹೆಚ್.ಡಿ ಗ್ರಾಮೀಣ ಅಭಿವೃದ್ಧಿ ವಿಭಾಗದ ಪ್ರಾಧ್ಯಾಪಕರ ವಿವರ:**

| ಕ್ರ.ಸಂ. | ಪ್ರಾಧ್ಯಾಪಕರ ಹೆಸರು | ಅರ್ಹತೆ | ಸೇವಾ ಅವಧಿ |
|---|---|---|---|
| 1 | ಡಾ.ಯಲ್ಲಪ್ಪ.ಟಿ<br>ತಾತ್ಕಾಲಿಕ ಅಧ್ಯಾಪಕರು | ಎಂ.ಎ. ಅರ್ಥಶಾಸ್ತ್ರ<br>ಪಿಎಚ್.ಡಿ. ಅರ್ಥಶಾಸ್ತ್ರ | 02 |

**ಎಂ.ಎ.ಪಿಹೆಚ್.ಡಿ ಗ್ರಾಮೀಣ ಅಭಿವೃದ್ಧಿ ವಿಭಾಗದ ವಿದ್ಯಾರ್ಥಿಗಳ ವಿವರ:**

| **2017-18** | | | | |
|---|---|---|---|---|
| **M.A.Ph.D. Rural Development** | | | | |
| **Sl No** | | **Male** | **Female** | **Total** |
| **1** | **(GM)** | - | - | **-** |
| **2** | **(SC)** | 01 | 01 | **02** |
| **3** | **(ST)** | 02 | - | **02** |
| **4** | **(OBC)** | 06 | - | **06** |
| **Total** | | **09** | **01** | **10** |

| **2018-19** | | | | |
|---|---|---|---|---|
| **M.A.Ph.D. Rural Development** | | | | |
| **Sl No** | | **Male** | **Female** | **Total** |
| **1** | **(GM)** | - | - | **-** |
| **2** | **(SC)** | 02 | 01 | **03** |
| **3** | **(ST)** | 01 | - | **01** |
| **4** | **(OBC)** | 12 | 04 | **16** |
| **Total** | | **15** | **05** | **20** |

**ಕೇಂದ್ರದ ಆಡಳಿತ ಸಿಬ್ಬಂದಿ ವಿವರ:**

1. ಶ್ರೀಮತಿ ಸುಮಂಗಲಾ – ಗ್ರಂಥಾಲಯ ಹಾಗೂ ಕಛೇರಿ ಸಹಾಯಕ
2. ಶ್ರೀ ಅನೀಸಪಾಷ್ ಎಸ್ – ಸಿಪಾಯಿ

# ಕನ್ನಡ ವಿಶ್ವವಿದ್ಯಾಲಯ ಹಂಪಿ

ವಿಸ್ತರಣಾ ಕೇಂದ್ರ ದೇವದುರ್ಗ ಜಿಲ್ಲಾ ರಾಯಚೂರು

ಮೊ.ನಂ. ೯೬೧೧೨೨೦೪೨೫ Email – devadurga2017@gmail.com


## ಕನ್ನಡ ಸಾಹಿತ್ಯ ವಿಭಾಗ

ಹೈದ್ರಾಬಾದ್ ಕರ್ನಾಟಕದ ಹಿಂದುಳಿದ ಪ್ರದೇಶವಾದ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನಲ್ಲಿ ಕನ್ನಡ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರವು ಸ್ಥಾಪಿತವಾಗಿದೆ. ಈ ಭಾಗದ ಹಿಂದುಳಿದ ಮತ್ತು ಬಡ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಒದಗಿಸುವ ಮತ್ತು ಸಂಶೋಧನೆಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಎಂ.ಎ.ಪಿಎಚ್.ಡಿ. ಕನ್ನಡ ಸಾಹಿತ್ಯ ಸಂಯೋಜಿತ ಪದವಿ ಕೋರ್ಸ್‌ನ್ನು ಆರಂಭಿಸಿದೆ. ಈ ಭಾಗದ ಸಾಹಿತ್ಯಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪ್ರಗತಿಯನ್ನು ಸಾಧಿಸುವುದೇ ಈ ವಿಭಾಗದ ಪ್ರಮುಖ ಗುರಿಯಾಗಿದೆ. ಈ ಭಾಗದ ಕಲೆ, ಸಾಹಿತ್ಯ, ಸಂಸ್ಕೃತಿ ಹುಡುಕಾಟದಲ್ಲಿ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಸಕ್ರೀಯವಾಗಿ ಅಧ್ಯಯನ ಹಾಗೂ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವುದು ಕೇಂದ್ರದ ಪ್ರಮುಖ ಕಾರ್ಯಸೂಚಿಗಳಲ್ಲಿ ಒಂದಾಗಿದೆ.

ಕನ್ನಡ ವಿಶ್ವವಿದ್ಯಾಲಯ ವಿಸ್ತರಣಾ ಕೇಂದ್ರ ದೇವದುರ್ಗದಲ್ಲಿ ವಿಶ್ವವಿದ್ಯಾಲಯದ ನಿಗದಿತ ಪಠ್ಯಬೋಧನೆಯನ್ನು ವ್ಯವಸ್ಥಿತವಾಗಿ ಮಾಡುವುದಲ್ಲದೇ ಈ ಭಾಗದ ಕನ್ನಡಿಗರ ಬದುಕು, ಹೋರಾಟದ ಹಾದಿ, ಕಲೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಅಧ್ಯಯನಗಳಿಗೆ ಸ್ವರೂಪ ಹಾಗೂ ನೆಲೆ–ಬೆಲೆಗಳನ್ನು ಕಂಡುಕೊಳ್ಳುವುದು ಪ್ರಮುಖ ಧ್ಯೇಯವಾಗಿದೆ.

ವಿಸ್ತರಣಾ ಕೇಂದ್ರವು ಸಾಹಿತ್ಯಿಕ ಸೀಮಾರೇಖೆಗಳನ್ನು ವಿಸ್ತರಿಸುತ್ತ ವಿದ್ಯಾರ್ಥಿಗಳಲ್ಲಿ ಓದುವ, ಬರೆಯುವ ಹಾಗೂ ನಡೆ–ನುಡಿಗಳನ್ನು ರೂಢಿಸುವ ನಿಟ್ಟಿನಲ್ಲೂ ಕಾರ್ಯಪ್ರವೃತ್ತವಾಗುವುದು. ಹಿಂದುಳಿದ ಪ್ರದೇಶವಾದ ದೇವದುರ್ಗದ ಇತಿಹಾಸ, ಸಮುದಾಯ, ಸಂಸ್ಕೃತಿ, ಸಮಾಜಿಕ, ಶೈಕ್ಷಣಿಕ ಪ್ರಗತಿ ಹಾಗೂ ರಾಜಕಾರಣದ ಕುರಿತು ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರಲ್ಲಿ ಸಂಶೋಧನಾತ್ಮಕ ಚಿಂತನೆ ಹಾಗೂ ವಾಸ್ತವಾಂಶಗಳ ಗ್ರಹಿಕೆಗೆ ನೆರವಾಗುವುದು.

ಮೇಲ್ಕಾಣಿಸಿದ ವಿಷಯಗಳ ಕುರಿತು ನಿಖರವಾದ ಸಂಶೋಧನಾತ್ಮಕ ವೈಧಾನಿಕತೆಗಳು ಹಾಗೂ ಸಾಹಿತ್ಯಿಕ ಚರ್ಚೆಗಳು ನಡೆಯುವಂತೆ ವಾತಾವರಣವನ್ನು ನಿರ್ಮಿಸುವುದು. ಹೈದ್ರಾಬಾದ್ ಕರ್ನಾಟಕ ಪ್ರದೇಶ ವ್ಯಾಪ್ತಿಯ ಕನ್ನಡ ಕಾವ್ಯಚಿಂತನೆ, ಮೀಮಾಂಸಾಪರ ವಿಚಾರಗಳು ಹಾಗೂ ಸಾಹಿತ್ಯ ಸಾಧಕರ ಕುರಿತು ಆಲೋಚಿಸುವ ಹಾಗೂ ಅವರ ಕೃತಿಗಳ ಬಗ್ಗೆ ವಿಮರ್ಶಾತ್ಮಕ ದೃಷ್ಟಿಕೋನ ಬೆಳೆಸಿಕೊಳ್ಳುವಂತೆ ಮಾಡುವುದು.

ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯ ನಂತರದ ಕಾಲಘಟ್ಟಗಳಲ್ಲಿ ಹೈದ್ರಾಬಾದ್ ಕರ್ನಾಟಕದ ಸಾಹಿತ್ಯ, ಕಲೆ ಹಾಗೂ ರಾಜಕೀಯ ಬೆಳವಣಿಗೆ ಹಾಗೂ ಸಾಹಿತ್ಯ ಪ್ರಕಾರಗಳಲ್ಲಿ ಕಂಡುಕೊಂಡ ಹೊಸತನದ ಬಗ್ಗೆ ವಿದ್ಯಾರ್ಥಿಗಳನ್ನು ಸಂಶೋಧನಾತ್ಮಕವಾಗಿ ಚಿಂತನೆಗೆ ತೊಡಗಿಸುವುದು. ವಿಸ್ತರಣಾ ಕೇಂದ್ರದ ಕನ್ನಡ ಸಾಹಿತ್ಯ ವಿಭಾಗವು ತನ್ನ ನಿಗದಿತ ಪಠ್ಯಕ್ರಮದ ಪೂರೈಕೆಯ ಜೊತೆಗೆ ಸಮಕಾಲಿನ ಸಂಗತಿಗಳ, ವಿದ್ಯಮಾನಗಳ ಕುರಿತು ಅರಿವನ್ನುಂಟುಮಾಡಲು ವಿಷಯ ತಜ್ಞರನ್ನು ಕರೆಸಿ ಸಾಂಸ್ಕೃತಿಕ ಮೂಖಾಮುಖಿ ಚಿಂತನೆ ನಡೆಸುವುದು. ಅಲ್ಲಿ ಚರ್ಚಿತ ವಿಷಯಗಳನ್ನು ಕೃತಿರೂಪದಲ್ಲಿ ಪ್ರಕಟಿಸುವ, ಪ್ರಚಾರಗೊಳಿಸುವ ಧೋರಣೆ ಹೊಂದಿದೆ.

ಸೃಜನಶೀಲ ಲೇಖಕರ ವಿಚಾರಧಾರೆ ಹಾಗೂ ಸಾಹಿತ್ಯಿಕ ಚಿಂತನೆಗಳ ಕುರಿತು ಆಲೋಚಿಸುವುದು. ಕನ್ನಡ ಸಾಹಿತ್ಯವು ಅಲಕ್ಷಿತ ಸಮುದಾಯಗಳ ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಿಂತನಾಕ್ರಮವನ್ನು, ಬುಡಕಟ್ಟು ಜನಾಂಗಗಳ ಅಧ್ಯಯನ ಹಾಗೂ ಜೀವನಕ್ರಮಾವಲೋಕನದ ಮೂಲಕ ಹಿಡಿದಿಡುವ ಪ್ರಯತ್ನವನ್ನು ಈ ಕನ್ನಡ ಸಾಹಿತ್ಯ ವಿಭಾಗವು ಹೊಂದಿದೆ.

ಈ ಕೆಳಗೆ 2017–18ರಿಂದ ಕನ್ನಡ ಸಾಹಿತ್ಯ ವಿಭಾಗದಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳ ವಿವರ ಇಲ್ಲಿ ನೀಡಲಾಗಿದೆ.

**ಎಂ.ಎ.ಪಿಹೆಚ್.ಡಿ ಕನ್ನಡ ಸಾಹಿತ್ಯ ವಿಭಾಗದ ಪ್ರಾಧ್ಯಾಪಕರ ವಿವರ:**

| ಕ್ರ.ಸಂ. | ಪ್ರಾಧ್ಯಾಪಕರ ಹೆಸರು | ಅರ್ಹತೆ | ಸೇವಾ ಅವಧಿ |
|---|---|---|---|
| 1 | ಡಾ. ಶಾಂತಪ್ಪ<br>ಸಹಾಯಕ ಪ್ರಾಧ್ಯಾಪಕರು | ಎಂ.ಎ., ಕನ್ನಡ ಮತ್ತು ಜಾನಪದ<br>ಎಂ.ಫಿಲ್ ಕನ್ನಡ<br>ಪಿಎಚ್.ಡಿ ಕನ್ನಡ | 27–03–2018<br>ರಿಂದ |
| 2 | ಡಾ. ಗಂಗಮ್ಮ<br>ತಾತ್ಕಾಲಿಕ ಅಧ್ಯಾಪಕರು | ಎಂ.ಎ., ಕನ್ನಡ ಮತ್ತು ಜಾನಪದ<br>ಪಿಎಚ್.ಡಿ ಜಾನಪದ | 03–09–2018<br>ರಿಂದ |
| 3 | ಶ್ರೀ.ಸಾಬಣ್ಣ<br>ತಾತ್ಕಾಲಿಕ ಅಧ್ಯಾಪಕರು | ಎಂ.ಎ ಕನ್ನಡ | 03–09–2018<br>ರಿಂದ |

**ಎಂ.ಎ.ಪಿಹೆಚ್.ಡಿ ಕನ್ನಡ ಸಾಹಿತ್ಯ ವಿಭಾಗದ ವಿದ್ಯಾರ್ಥಿಗಳ ವಿವರ:**

| 2017-18 | | | | |
|---|---|---|---|---|
| **M.A.Ph.D. Kannada Sahitya** | | | | |
| **Sl No** | | **Male** | **Female** | **Total** |
| **1** | **(GM)** | - | 01 | **01** |
| **2** | **(SC)** | - | 03 | **03** |
| **3** | **(ST)** | - | - | **-** |
| **4** | **(OBC)** | 01 | - | **01** |
| **Total** | | **01** | **04** | **05** |

| 2018-19 | | | | |
|---|---|---|---|---|
| **M.A.Ph.D. Kannada Sahitya** | | | | |
| **Sl No** | | **Male** | **Female** | **Total** |
| **1** | **(GM)** | - | - | **-** |
| **2** | **(SC)** | 01 | 02 | **03** |
| **3** | **(ST)** | 01 | 02 | **03** |
| **4** | **(OBC)** | 05 | 09 | **14** |
| **Total** | | **07** | **13** | **20** |

# ಗ್ರಾಮೀಣ ಅಭಿವೃದ್ಧಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ ಹಂಪಿ, ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನಲ್ಲಿ ವಿಸ್ತರಣಾ ಕೇಂದ್ರವನ್ನು ಸ್ಥಾಪನೆ ಮಾಡಿದೆ. ಈ ಕೇಂದ್ರದಲ್ಲಿ ಎಂ.ಎ.ಪಿಎಚ್.ಡಿ ಗ್ರಾಮೀಣ ಅಭಿವೃದ್ಧಿ ಸಂಯೋಜಿತ ಪದವಿ ಕೋರ್ಸ್‌ನ್ನು ಆರಂಭಿಸಿದೆ. ಈ ವಿಭಾಗದ ಮೂಲ ಆಶಯವು ಕರ್ನಾಟಕದ ಅಭಿವೃದ್ಧಿಯಲ್ಲಿ ತೀರಾ ಹಿಂದುಳಿದ ಪ್ರದೇಶವಾದ ಹೈದ್ರಾಬಾದ್ ಕರ್ನಾಟಕವು, ಕರ್ನಾಟಕ ಸರ್ಕಾರದ ಸಾಂಖ್ಯಿಕ ಇಲಾಖೆ ಹೊರ ತರುವ ಮಾನವ ಅಭಿವೃದ್ಧಿ ವರದಿಗಳಲ್ಲಿ ಅತ್ಯಂತ ಹಿಂದುಳಿದ ಭಾಗವೆಂದು ಹಲವಾರು ಸೂಚ್ಯಂಕಗಳ ಮೂಲಕ ಗುರುತಿಸಲಾಗಿದೆ. ಅದರಲ್ಲಿಯೂ ರಾಯಚೂರು ಜಿಲ್ಲೆ ಕೊನೆಯ ಸ್ಥಾನದಲ್ಲಿದೆ. ಈ ಜಿಲ್ಲೆಯ ದೇವದುರ್ಗ ತಾಲ್ಲೂಕು ಅತ್ಯಂತ ಹಿಂದುಳಿದ ತಾಲ್ಲೂಕುಗಳ ಸೂಚ್ಯಂಕ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿರುವುದನ್ನು ಗುರುತಿಸಲಾಗಿದೆ.

ಕನ್ನಡ ವಿಶ್ವವಿದ್ಯಾಲಯವು ಇಂತಹ ದುಸ್ಥಿತಿಯಲ್ಲಿರುವ ಪ್ರದೇಶಗಳನ್ನು ಗುರುತಿಸಿ ಇಲ್ಲಿನ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ, ಜನರ ಬದುಕು–ಬವಣೆ ಮತ್ತು ಅಭಿವೃದ್ಧಿ, ರಾಜಕೀಯ, ಬರದ ಪರಿಸ್ಥಿತಿಗಳ ಕುರಿತು ಸಂಶೋಧನಾತ್ಮಕ ನೆಲೆಯಲ್ಲಿ ಅಧ್ಯಯನ ಮಾಡುತ್ತದೆ. ವಿಶೇಷವಾಗಿ ಇಲ್ಲಿನ ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ಉನ್ನತ ಶಿಕ್ಷಣಕ್ಕೆ ಎಡೆಮಾಡಿಕೊಡುವುದಲ್ಲದೆ ಈ ಭಾಗದ ಹಿಂದುಳಿಯುವಿಕೆಗೆ ಕಾರಣವಾದ ಸಮಸ್ಯೆಗಳನ್ನು ಕುರಿತು ಸಂಶೋಧನಾತ್ಮಕ ಪ್ರಬಂಧಗಳನ್ನು, ವಿಶೇಷ ಉಪನ್ಯಾಸಗಳನ್ನು ಏರ್ಪಡಿಸುವುದರಿಂದ ಈ ಭಾಗದ ಜನರಿಗೆ ಪ್ರಜ್ಞೆಯನ್ನು ಮೂಡಿಸುವುದಾಗಿದೆ. ಪ್ರಬಂಧಗಳನ್ನು ತಯಾರಿಸುವುದು ಮತ್ತು ವಿಚಾರ ಸಂಕಿರಣಗಳನ್ನು, ಕಮ್ಮಟಗಳನ್ನು, ವಿಶೇಷ ಉಪನ್ಯಾಸಗಳನ್ನು ರೂಪಿಸಿ ಜನರಿಗೆ ಅಭಿವೃದ್ಧಿಯಲ್ಲಿ ಭಾಗವಹಿಸುವಿಕೆಯ ಮಹತ್ವವನ್ನು ಪ್ರಚಾರಪಡಿಸುವುದು ಈ ಅಧ್ಯಯನ ವಿಭಾಗದ ಮಹತ್ತರವಾದ ಉದ್ದೇಶವಾಗಿದೆ. ಈ ವಿಭಾಗದ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಕ್ರಿಯಾಶೀಲರಾಗಿ ತಮ್ಮನ್ನು ಸಂಶೋಧನಾ ಅಧ್ಯಯನದಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವುದು. ಈ ಭಾಗದ ಬಹಳ ಮುಖ್ಯವಾಗಿ ಹಿಂದುಳಿಯುವಿಕೆಗೆ ಕಾರಣವಾದ ಚಾರಿತ್ರಿಕ ಸಂಗತಿಗಳ ಕುರಿತು ವಿಮರ್ಶಾತ್ಮಕವಾದ ದೃಷ್ಟಿಕೋನ ಮೂಡಿಸುವುದು ಈ ಅಧ್ಯಯನ ವಿಭಾಗದ ಪ್ರಮುಖ ತಿರುಳಾಗಿದೆ.